# ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

**ವಿಷಯ:** 2024-25ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ "ಮೌಲಾನಾ ಅಬುಲ್ ಕಲಾಂ ಆಜಾದ್" ಪ್ರತಿಭಾ ಪುರಸ್ಕಾರ ನೀಡುವ ಕುರಿತು.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 182 ಎಂಡಿಎಸ್ 2024 ದಿನಾಂಕ: 04.04.2024.
2. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 182 ಎಂಡಿಎಸ್ 2024 ದಿನಾಂಕ: 05.04.2024.
3. ಸರ್ಕಾರದ ಆದೇಶ ಸಂಖ್ಯೆ:ಎಂಡಬ್ಲ್ಯ್ಯೂಡಿ 235 ಎಂಡಿಎಸ್ 2024 ದಿ:27.06.2024.
   ಸರ್ಕಾರದ ಆದೇಶ ಸಂಖ್ಯೆ:ಎಂಡಬ್ಲ್ಯ್ಯೂಡಿ 182 ಎಂಡಿಎಸ್ 2024 ದಿ:06.07.2024.
4. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 182 ಎಂಡಿಎಸ್ 2024 ದಿನಾಂಕ: 12.07.2024.
5. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ-ಎಂಡಿಎಸ್/282/2024, ದಿನಾಂಕ: 03.08.2024

★★★★★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರಿ ಆದೇಶದಲ್ಲಿ 2023-24ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು 2024-25ನೇ ಸಾಲಿನವರೆಗೆ ಮುಂದುವರೆಸಲು ಆದೇಶಿಸಿದೆ. ಉಲ್ಲೇಖ(2)ರ ಸರ್ಕಾರಿ ಆದೇಶದಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ ಯೋಜನೆಗೆ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

ಉಲ್ಲೇಖ(3)ರ ಅಲ್ಪಸಂಖ್ಯಾತರ ನಿರ್ದೇಶನಾಲಯದ ಯೋಜನೆ ಮತ್ತು ಕಾರ್ಯಕ್ರಮಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನಕ್ಕೆ ಅನುಗುಣವಾಗಿ ಕ್ರಿಯಾಯೋಜನೆಗೆ ಅನುಮೋದನೆ ನೀಡಿ ಆದೇಶಿಸಿದೆ. ಉಲ್ಲೇಖ(4)ರ ಸರ್ಕಾರಿ ಆದೇಶದಲ್ಲಿ 2024-25ನೇ ಸಾಲಿಗೆ ಮುಂದುವರೆಸಲಾಗಿರುವ ಯೋಜನೆಗಳಿಗೆ ಪ್ರಸಕ್ತ ಸಾಲಿನಲ್ಲಿ ಮಂಜೂರಾಗಿರುವ ಆಯವ್ಯಯದಲ್ಲಿ ಎರಡನೇ ತ್ರೈಮಾಸಿಕ ಕಂತಿನ ಶೇ.25 ರಷ್ಟು ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಿದೆ.

ಉಲ್ಲೇಖ(5)ರ ಸರ್ಕಾರಿ ಆದೇಶದಲ್ಲಿ 2024-25ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ, ಮತ್ತು ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗಳಲ್ಲಿ ಮೊದಲ ಪ್ರಯತ್ನದಲ್ಲಿಯೇ ಶೇಕಡ 90 ಮತ್ತು ಅದಕ್ಕಿಂತ ಹೆಚ್ಚು ಅಂಕ ಗಳಿಸಿದ ಅಗ್ರ ಶ್ರೇಣಿಯ (Top Most) 1500 ಅಲ್ಪಸಂಖ್ಯಾತರ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನುದಾನ ಲಭ್ಯತೆಯನುಸಾರ ಪ್ರತಿ ವರ್ಷ ಆಗಸ್ಟ್ 15 ಸ್ವಾತಂತ್ರ್ಯ ದಿನಾಚರಣೆಯಂದು "ಮೌಲಾನಾ ಅಬುಲ್ ಕಲಾಂ ಆಜಾದ್ ಪ್ರತಿಭಾ ಪುರಸ್ಕಾರ" ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ಹೊರಡಿಸಿ ಈ ಕೆಳಕಂಡಂತೆ ಮಂಜೂರಾತಿ ನೀಡಿ ಆದೇಶಿಸಿದೆ

| ಕ್ರ.ಸಂ | ಕೋರ್ಸುಗಳ ವಿವರ | ಪುರಸ್ಕಾರ ನೀಡಬೇಕಾದ ವಿದ್ಯಾರ್ಥಿಗಳ ಸಂಖ್ಯೆ | ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ಎಸ್.ಎಸ್.ಎಲ್.ಸಿ | 1,000 | 8,000/- |
| ೨ | ೨ನೇ ಪಿಯುಸಿ | 500 | 12,000/- |

ಅದರಂತೆ, ಆಯಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು "ಮೌಲಾನಾ ಅಬುಲ್ ಕಲಾಂ ಆಜಾದ್ ಪ್ರತಿಭಾ ಪುರಸ್ಕಾರ"ದ ಮಂಜೂರಾತಿ ಪ್ರಾಧಿಕಾರಿಯಾಗಿದ್ದು, ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಮೆರಿಟ್ ಮತ್ತು ಮೀಸಲಾತಿಗನುಗುಣವಾಗಿ ನೀಡಲಾಗುವ ಅರ್ಹ ವಿದ್ಯಾರ್ಥಿಗಳ ಪಟ್ಟಿಗನುಗುಣವಾಗಿ ಸರ್ಕಾರಿ ಮಾರ್ಗಸೂಚಿಯನ್ವಯ 2024-25ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ/ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳಲ್ಲಿ ಮೊದಲ ಪ್ರಯತ್ನದಲ್ಲಿಯೇ ಶೇಕಡ ೯೦ ಮತ್ತು ಅದಕ್ಕಿಂತ ಹೆಚ್ಚು ಅಂಕ ಗಳಿಸಿದ ಅಗ್ರ ಶ್ರೇಣಿಯ 546 ವಿದ್ಯಾರ್ಥಿಗಳಿಗೆ ಒಟ್ಟು ರೂ. 65.52 ಲಕ್ಷಗಳನ್ನು ಅನುಬಂಧ-1 ರಂತೆ ಹಾಗೂ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳಲ್ಲಿ ಮೊದಲ ಪ್ರಯತ್ನದಲ್ಲಿಯೇ ಶೇಕಡ ೯೦ ಮತ್ತು ಅದಕ್ಕಿಂತ ಹೆಚ್ಚು ಅಂಕ ಗಳಿಸಿದ ಅಗ್ರ ಶ್ರೇಣಿಯ 1016 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಒಟ್ಟು ರೂ. 81.28 ಲಕ್ಷಗಳನ್ನು ಅನುಬಂಧ-೨ ರಂತೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ ಬಿಡುಗಡೆಗೊಳಿಸಲು ನಿರ್ಧರಿಸಿದ್ದು, ಅದರಂತೆ ಈ ಆದೇಶ.

## ಆದೇಶ

**ಸಂಖ್ಯೆ:ಅಸಂನಿ/ಅ/ಪ್ರೋ.ಧ/ಸಿಆರ್-01/ಪಿಯುಸಿ-ಎಸ್.ಎಸ್.ಎಲ್.ಸಿ/2024-25 ದಿನಾಂಕ:12.08.2024**

2024-25ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ/ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳಲ್ಲಿ ಮೊದಲ ಪ್ರಯತ್ನದಲ್ಲಿಯೇ ಶೇಕಡ ೯೦ ಮತ್ತು ಅದಕ್ಕಿಂತ ಹೆಚ್ಚು ಅಂಕ ಗಳಿಸಿದ ಅಗ್ರ ಶ್ರೇಣಿಯ 546 ವಿದ್ಯಾರ್ಥಿಗಳಿಗೆ ಒಟ್ಟು ರೂ. 65.52 ಲಕ್ಷಗಳನ್ನು ಅನುಬಂಧ-1 ರಂತೆ ಹಾಗೂ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳಲ್ಲಿ ಮೊದಲ ಪ್ರಯತ್ನದಲ್ಲಿಯೇ ಶೇಕಡ ೯೦ ಮತ್ತು ಅದಕ್ಕಿಂತ ಹೆಚ್ಚು ಅಂಕ ಗಳಿಸಿದ ಅಗ್ರ ಶ್ರೇಣಿಯ 1016 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಒಟ್ಟು ರೂ. 81.28 ಲಕ್ಷಗಳನ್ನು ಅನುಬಂಧ-೨ ರಂತೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

| ಕ್ರ.ಸಂ | ಕೋರ್ಸುಗಳ ವಿವರ | ಪುರಸ್ಕಾರ ನೀಡಬೇಕಾದ ವಿದ್ಯಾರ್ಥಿಗಳ ಸಂಖ್ಯೆ | ಪ್ರತಿ ವಿದ್ಯಾರ್ಥಿಗೆ ಮೊತ್ತ (ರೂ.ಗಳಲ್ಲಿ) | ಒಟ್ಟು ಬಿಡುಗಡೆ (ರೂ ಲಕ್ಷಗಳಲ್ಲಿ) |
|---|---|---|---|---|
| 1 | ೨ನೇ ಪಿಯುಸಿ | 546 | 12,000/- | 65.52 |
| ೨ | ಎಸ್.ಎಸ್.ಎಲ್.ಸಿ | 1016 | 8,000/- | 81.28 |
| ಒಟ್ಟು | | | | 146.80 |

<u>ಷರತ್ತುಗಳು:-</u>

1. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ-ಎಂಡಿಎಸ್/೨೮೨/೨೦೨೪ ಬೆಂಗಳೂರು, ದಿನಾಂಕ: ೦೩-೦೮-೨೦೨೪ ರಲ್ಲಿ ವಿವರಿಸಿರುವ ಮಾರ್ಗಸೂಚಿಗಳನ್ವಯ "ಮೌಲಾನಾ ಅಬುಲ್ ಕಲಾಂ ಆಜಾದ್ ಪ್ರತಿಭಾ ಪುರಸ್ಕಾರ"ವನ್ನು ನೀಡುವುದು.
2. ಸದರಿ ಯೋಜನೆಗೆ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಮಂಜೂರಾತಿ ಪ್ರಾಧಿಕಾರಿಯಾಗಿರುತ್ತಾರೆ.
3. ಅರ್ಹ ವಿದ್ಯಾರ್ಥಿಗಳಿಗೆ ಆಗಸ್ಟ್-೧೫ ಸ್ವಾತಂತ್ರ್ಯಾ ದಿನಾವರಣೆಯಂದು "ಮೌಲಾನಾ ಅಬುಲ್ ಕಲಾಂ ಆಜಾದ್ ಪ್ರತಿಭಾ ಪುರಸ್ಕಾರ" ವಿತರಿಸಲು ಕ್ರಮವಹಿಸುವುದು.
4. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು.
5. "ಮೌಲಾನಾ ಅಬುಲ್ ಕಲಾಂ ಆಜಾದ್ ಪ್ರತಿಭಾ ಪುರಸ್ಕಾರ"ದ ಪ್ರೋತ್ಸಾಹ ಧನವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ DBT/NEFT ಮೂಲಕ ನೇರವಾಗಿ ವರ್ಗಾವಣೆ ಮಾಡತಕ್ಕದು.
6. **ರಾಜ್ಯಮಟ್ಟದಲ್ಲಿ ಮೀಸಲಾತಿ ಪಟ್ಟಿಯನ್ನು ಸಿದ್ದಪಡಿಸಲಾಗಿದ್ದು, ಸದರಿ ಪಟ್ಟಿಯಲ್ಲಿನ ವಿದ್ಯಾರ್ಥಿಗಳು ಮೀಸಲಾತಿಯನ್ವಯ ಸದರಿ ಸಮುದಾಯಕ್ಕೆ ಸೇರಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.**
7. ಈ ಪ್ರೋತ್ಸಾಹಧನದ ಮಂಜೂರಾತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸಂಬಂಧಪಟ್ಟ ಶಾಲೆ/ಕಾಲೇಜುಗಳಿಂದ ಪಡೆದು ಜಿಲ್ಲಾ ಕಛೇರಿಯಲ್ಲಿ ಇರಿಸಿಕೊಳತಕ್ಕದು ಹಾಗೂ ಉನ್ನತ ಅಧಿಕಾರಿಗಳು/ಮಹಾಲೇಖಪಾಲರ ಲೆಕ್ಕಪರಿಶೋಧನೆ ವೇಳೆಯಲ್ಲಿ ದಾಖಲೆಗಳನ್ನು ಒದಗಿಸತಕ್ಕದು.
8. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನ ಭರಿಸಿದ ವಿವರವನ್ನು (ಖಜಾನೆಯಿಂದ ಪಡೆದ ೬೨ಬಿ ಪ್ರತಿಯೊಂದಿಗೆ) ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.
9. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಆಗಸ್ಟ್-೩೧ ರೊಳಗಾಗಿ ವೆಚ್ಚ ಭರಿಸಿ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸುವುದು.

ಇದಕ್ಕೆ ತಗಲುವ ವೆಚ್ಚವನ್ನು ಆಬ್ಜೆಕ್ಟ್ ಕೋಡ್ (೦೫೧) ಲೆಕ್ಕಶೀರ್ಷಿಕೆ ೨೨೨೫-೦೪-೨೭೭-೦-೦೩ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ, ರಾಜ್ಯವಲಯ ಯೋಜನೆಯಡಿ ೨೦೨೪-೨೫ನೇ ಸಾಲಿನಲ್ಲಿ ಒದಗಿಸಿರುವ ಆಯವಯ್ಯದಲ್ಲಿ ಭರಿಸುವುದು.

**ನಿರ್ದೇಶಕರು,**
**ಅಲ್ಪಸಂಖ್ಯಾತರ ನಿರ್ದೇಶನಾಲಯ,**
**ಬೆಂಗಳೂರು.**

<u>ಪ್ರತಿಯನ್ನು:-</u>

1) ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
3) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು.
4) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಗಳು.
5) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
6) ಸಂಬಂಧಪಟ್ಟ ವಸತಿ ಶಾಲೆ/ ಕಾಲೇಜುಗಳ ಪ್ರಾಂಶುಪಾಲರುಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
7) ಲೆಕ್ಕ ಪತ್ರ ಶಾಖೆ,
8) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ

# ಅಲ್ಪಸಂಖ್ಯಾತರ ನಿರ್ದೇಶನಾಲಯ

## ಅನುಬಂಧ-01

**2024-25ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ "ಮೌಲಾನಾ ಅಬುಲ್ ಕಲಾಂ ಆಜಾದ್" ಪ್ರತಿಭಾ ಪುರಸ್ಕಾರ ನೀಡುವ ವಿವರ (ಎಸ್.ಎಸ್.ಎಲ್.ಸಿ)**

**ಸಂಖ್ಯೆ:ಅಸಂನಿ/ಅ/ಪ್ರೋ.ಧ/ಸಿಆರ್-01/2024-25 ದಿನಾಂಕ: 12.08.2024**

| ಕ್ರ.ಸಂ. | ಜಿಲ್ಲೆ | ವಿದ್ಯಾರ್ಥಿಗಳ ಸಂಖ್ಯೆ | ಆರ್ಥಿಕ ಗುರಿ (ರೂ.ಗಳಲ್ಲಿ |
|---|---|---|---|
| 1 | ಬಾಗಲಕೋಟೆ | 49 | 392000.00 |
| 2 | ಬೆಂಗಳೂರು ನಗರ | 147 | 1176000.00 |
| 3 | ಬೆಂಗಳೂರು ಗ್ರಾಮಂತರ | 7 | 56000.00 |
| 4 | ಬೆಳಗಾವಿ | 94 | 752000.00 |
| 5 | ಬಳ್ಳಾರಿ | 8 | 64000.00 |
| 6 | ಬೀದರ | 28 | 224000.00 |
| 7 | ಚಾಮರಾಜನಗರ | 4 | 32000.00 |
| 8 | ಚಿಕ್ಕಬಳ್ಳಾಪುರ | 16 | 128000.00 |
| 9 | ಚಿಕ್ಕಮಗಳೂರು | 18 | 144000.00 |
| 10 | ಚಿತ್ರದುರ್ಗ | 14 | 112000.00 |
| 11 | ದಾವಣಗೆರೆ | 14 | 112000.00 |
| 12 | ಧಾರವಾಡ | 31 | 248000.00 |
| 13 | ದಕ್ಷಿಣ ಕನ್ನಡ | 167 | 1336000.00 |
| 14 | ಗದಗ | 15 | 120000.00 |
| 15 | ಹಾಸನ | 35 | 280000.00 |
| 16 | ಹಾವೇರಿ | 28 | 224000.00 |
| 17 | ಕಲಬುರಗಿ | 25 | 200000.00 |
| 18 | ಕೊಡಗು | 11 | 88000.00 |
| 19 | ಕೋಲಾರ | 13 | 104000.00 |
| 20 | ಕೊಪ್ಪಳ | 12 | 96000.00 |
| 21 | ಮಂಡ್ಯ | 2 | 16000.00 |
| 22 | ಮೈಸೂರು | 34 | 272000.00 |
| 23 | ರಾಯಚೂರು | 22 | 176000.00 |
| 24 | ರಾಮನಗರ | 5 | 40000.00 |
| 25 | ಶಿವಮೊಗ್ಗ | 42 | 336000.00 |
| 26 | ತುಮಕೂರು | 15 | 120000.00 |
| 27 | ಉಡುಪಿ | 43 | 344000.00 |
| 28 | ಉತ್ತರ ಕನ್ನಡ | 37 | 296000.00 |
| 29 | ವಿಜಯಪುರ | 58 | 464000.00 |
| 30 | ಯಾದಗಿರಿ | 13 | 104000.00 |
| 31 | ವಿಜಯನಗರ | 9 | 72000.00 |
| **ಒಟ್ಟು** | | **1016** | 8128000.00 |

ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು

# ಅಲ್ಪಸಂಖ್ಯಾತರ ನಿರ್ದೇಶನಾಲಯ

## ಅನುಬಂಧ-02

2024-25ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ "ಮೌಲಾನಾ ಅಬುಲ್ ಕಲಾಂ ಆಜಾದ್" ಪ್ರತಿಭಾ ಪುರಸ್ಕಾರ ನೀಡುವ ವಿವರ (ಪಿ.ಯು.ಸಿ)

ಸಂಖ್ಯೆ:ಅಸಂನಿ/ಅ/ಪ್ರೋ.ಧ/ಸಿಆರ್-01/2024-25 ದಿನಾಂಕ: 12.08.2024

| ಕ್ರ.ಸಂ. | ಜಿಲ್ಲೆ | ವಿದ್ಯಾರ್ಥಿಗಳ ಸಂಖ್ಯೆ | ಆರ್ಥಿಕ ಗುರಿ (ರೂ.ಗಳಲ್ಲಿ |
|---|---|---|---|
| 1 | ಬಾಗಲಕೋಟೆ | 12 | 144000.00 |
| 2 | ಬೆಂಗಳೂರು ನಗರ | 121 | 1452000.00 |
| 3 | ಬೆಂಗಳೂರು ಗ್ರಾಮಂತರ | 4 | 48000.00 |
| 4 | ಬೆಳಗಾವಿ | 21 | 252000.00 |
| 5 | ಬಳ್ಳಾರಿ | 9 | 108000.00 |
| 6 | ಬೀದರ | 14 | 168000.00 |
| 7 | ಚಾಮರಾಜನಗರ | 1 | 12000.00 |
| 8 | ಚಿಕ್ಕಬಳ್ಳಾಪುರ | 12 | 144000.00 |
| 9 | ಚಿಕ್ಕಮಗಳೂರು | 6 | 72000.00 |
| 10 | ಚಿತ್ರದುರ್ಗ | 4 | 48000.00 |
| 11 | ದಾವಣಗೆರೆ | 13 | 156000.00 |
| 12 | ಧಾರವಾಡ | 14 | 168000.00 |
| 13 | ದಕ್ಷಿಣ ಕನ್ನಡ | 90 | 1080000.00 |
| 14 | ಗದಗ | 4 | 48000.00 |
| 15 | ಹಾಸನ | 11 | 132000.00 |
| 16 | ಹಾವೇರಿ | 4 | 48000.00 |
| 17 | ಕಲಬುರಗಿ | 30 | 360000.00 |
| 18 | ಕೊಡಗು | 3 | 36000.00 |
| 19 | ಕೋಲಾರ | 11 | 132000.00 |
| 20 | ಕೊಪ್ಪಳ | 14 | 168000.00 |
| 21 | ಮಂಡ್ಯ | 1 | 12000.00 |
| 22 | ಮೈಸೂರು | 14 | 168000.00 |
| 23 | ರಾಯಚೂರು | 15 | 180000.00 |
| 24 | ರಾಮನಗರ | 4 | 48000.00 |
| 25 | ಶಿವಮೊಗ್ಗ | 11 | 132000.00 |
| 26 | ತುಮಕೂರು | 13 | 156000.00 |
| 27 | ಉಡುಪಿ | 22 | 264000.00 |
| 28 | ಉತ್ತರ ಕನ್ನಡ | 9 | 108000.00 |
| 29 | ವಿಜಯಪುರ | 45 | 540000.00 |
| 30 | ಯಾದಗಿರಿ | 4 | 48000.00 |
| 31 | ವಿಜಯನಗರ | 10 | 120000.00 |
| **ಒಟ್ಟು** | | **546** | 6552000.00 |

ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು